O.S.No.:1/2018
P.W.:1

ಈ ದಿನ ದಿಃ11.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ವಿ.ಎಂ ವಕೀಲರಿಂದಃ-**

ನಾನು 7 ನೇ ತರಗತಿಯವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಪ್ರತಿವಾದಿಯರು ನಮ್ಮ ಸ್ವತ್ತಿಗೆ ತೊಂದರೆ ಕೊಡುತ್ತಿದ್ದುದ್ದರಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾಸ್ತಿಯ ಕಾನೇಸುಮಾರಿ ನಂ.360/400/1 ರಲ್ಲಿ ವಿಸ್ತೀರ್ಣ ಪೂರ್ವ-ಪಶ್ಚಿಮ 35 ಅಡಿ, ಉತ್ತರ-ದಕ್ಷಿಣ 70 ಅಡಿ ಇರುತ್ತದೆ. ದಾವಾಸ್ತಿಯು ಹಾರೋಹಳ್ಳಿಯ ಈಡಿಗರ ಬೀದಿಯಲ್ಲಿ ಬರುತ್ತದೆ. ದಾವಾಸ್ತಿಯಲ್ಲಿ ಖಾಲಿ ಜಾಗ ಇದ್ದು, ಸ್ವಲ್ಪ ನಾಟಿ ಹೆಂಚಿನ ಮನೆ ಇರುತ್ತದೆ. ಸದರಿ ಮನೆಗೆ ಅಂದಾಜು 70 ವರ್ಷ ಆಗಿರಬಹುದು.

ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು **ನಿಡಿ-1 ಮತ್ತು 2** ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ರಲ್ಲಿರುವ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ. ಸದರಿ ನಿಡಿ-1 ಮತ್ತು 2 ರಲ್ಲಿರುವ ವ್ಯಕ್ತಿಗಳು ಪ್ರತಿವಾದಿಗಳಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಡಿ-1 ಮತ್ತು 2 ರಲ್ಲಿರುವ ಮನೆಯ ಒಳಗಿನ ಫೋಟೋವನ್ನು ಸಾಕ್ಷಿ ಗೆ ತೋರಿಸಿದ್ದು, ಅದಕ್ಕೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ಗಂಡ ಮತ್ತು 2 ನೇ ಪ್ರತಿವಾದಿಯ ತಂದೆಯ ಹೆಸರು ಹೆಚ್.ವಿ. ದೇವರಾಜು ಎಂದು ಇರುತ್ತದೆ. ಸದರಿ ಹೆಚ್.ವಿ ದೇವರಾಜು ಇವರ ತಂದೆಯ ಹೆಸರು ವೆಂಕಟಪ್ಪ ಎಂದರೆ ಸರಿ. ನನ್ನ ತಂದೆಯ ಹೆಸರು ರಾಮಯ್ಯ ಎಂದರೆ ಸರಿ. ನನ್ನ ತಂದೆ ರಾಮಯ್ಯ ಮತ್ತು ವೆಂಕಟಪ್ಪ ಒಂದೇ ತಾಯಿಯ ಮಕ್ಕಳು ಎಂದರೆ ಸರಿ.

ದಾವಾಸ್ತಿಯ ಮೊದಲಿನ ನಂಬರ್ ಹೇಳಲು ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಈಗಿರುವ ನಂಬರ್ ಮೊದಲಿನಿಂದಲ್ಲೂ ಇರುತ್ತದೆ ಎಂದು ನುಡಿಯುತ್ತಾರೆ. ದಾವಾಸ್ತಿಯ ನಂ.360/400/1 ರ ಹಳೆಯ ನಂಬರ್ 360/400 ಎಂದು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಂ.360/400 ರ ಖಾತೆ ವೆಂಕಟಪ್ಪ ರವರ ಹೆಸರಿಗೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯು ನಂ.360/400 ಎಂದು ಇದ್ದಿರುವುದು ಗೊತ್ತಿದ್ದರೂ ನಂ.360/400/1 ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ 38 X 47 ಅಡಿ ಒಂದು ಭಾಗ ಇದ್ದು, ಇನ್ನೊಂದು ಭಾಗ 25 X 21 ಅಡಿ ಇರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿರುವ ಕಟ್ಟಿರುವ ಮನೆಯ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ.

ದಾವಾಸ್ತಿಯ ಹಳೆ ನಂ.360/400, 1963 ರಿಂದ 84 ರ ವರೆಗೆ 1 ನೇ ಪ್ರತಿವಾದಿಯ ಮಾವ, 2 ನೇ ಪ್ರತಿವಾದಿಯ ಅಜ್ಜ ವೆಂಕಟಪ್ಪ ಬಿನ್ ತಿರುಮಲನಾಯ್ಕ ಇವರ ಹೆಸರಿನಲ್ಲಿ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ವೆಂಕಟಪ್ಪ ಬದುಕಿರುವವರೆಗೆ ಸದರಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಮನೆಯನ್ನು ದಾವಾಸ್ತಿಯಲ್ಲಿ ವೆಂಕಟಪ್ಪ ಕಟ್ಟಿಸಿರುತ್ತಾರೆಂದರೆ ಸರಿಯಲ್ಲ. ವೆಂಕಟಪ್ಪ ಈಗ ಮೃತರಾಗಿರುತ್ತಾರೆ. ವೆಂಕಟಪ್ಪ ರವರಿಗೆ ಒಟ್ಟು 5 ಜನ ಮಕ್ಕಳಿದ್ದು, ಅವರುಗಳೆಂದರೆ, ರಾಮಕೃಷ್ಣಯ್ಯ, ದೇವರಾಜು.ಹೆಚ್.ವಿ, ವೆಂಕಟಮ್ಮ, ಗೌರಮ್ಮ ಮತ್ತು ಲಕ್ಷ್ಮಮ್ಮ ಎಂದು ಇರುತ್ತಾರೆಂದರೆ ನನಗೆ ಗೊತ್ತಿಲ್ಲ.

ದಾವಾಸ್ತಿ ಹಳೆ ನಂ.360/400 ನ್ನು ಬಾಲಮ್ಮ ಎಂಬುವವರು ಖಾತೆ ಹೆಸರಿನಲ್ಲಿರುವ ವೆಂಕಟಪ್ಪ ನನ್ನ ಗಂಡ ಎಂದು ಸುಳ್ಳು ಹೇಳಿ ಕಂದಾಯ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಳು

ಎಂದರೆ ನನಗೆ ಗೊತ್ತಿರುವುದಿಲ್ಲ. ಬಾಲಮ್ಮ ರವರಿಗೆ ದಾವಾಸ್ತಿಯ ಹಳೆಯ ನಂಬರ್ ಕುರಿತು ಯಾವುದೇ ಹಕ್ಕು ಮತ್ತು ಸ್ವಾಧೀನತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಬಾಲಮ್ಮ ತೀರಿದ ನಂತರ ದಾವಾಸ್ತಿಯ ಹಳೆಯ ನಂ.360/400 ಕ್ಕೆ ಅವರ ಮೊಮ್ಮಗನಾದ ಸೋಮಣ್ಣ ಬಿನ್ ಒಬಯ್ಯ ಇತನು ತನ್ನ ಅಜ್ಜಿಯ ಹೆಸರಿನಲ್ಲಿರುವ ಖಾತೆಯನ್ನು ದುರುಪಯೋಗ ಪಡಿಸಿಕೊಂಡು ತನ್ನ ಹೆಸರಿಗೆ ಯಾವುದೇ ಹಕ್ಕು, ಸ್ವಾಧೀನ ಇರದೆ ಇದ್ದರು ವರ್ಗಾವಣೆ ಮಾಡಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಬಾಲಮ್ಮ ಅವರ ಮೊಮ್ಮಗ ಸೋಮಣ್ಣ ಇವರು 1 ನೇ ಪ್ರತಿವಾದಿಯ ಮಾವ ಹಾಗೂ 2 ನೇ ಪ್ರತಿವಾದಿ ಅಜ್ಜ ವೆಂಕಟಪ್ಪನಿಗೂ ಯಾವುದೇ ರೀತಿಯ ಸಂಬಂಧ ಇರುವುಲ್ಲ ಎಂದರೆ ನನಗೆ ಗೊತ್ತಿಲ್ಲ.

ದಾವಾಸ್ತಿಯ ಹಳೆ ನಂಬರ್ ಬಾಲಮ್ಮ ಮತ್ತು ಸೋಮಣ್ಣ ರವರ ಹೆಸರಿಗೆ ಅಕ್ರಮವಾಗಿ ವರ್ಗಾವಣೆಯಾಗಿರುವುದನ್ನು ಪ್ರಶ್ನಿಸಿ 2 ನೇ ಪ್ರತಿವಾದಿ ಕೇಶವಮೂರ್ತಿ ತಾಲ್ಲೂಕು ಪಂಚಾಯಿತಿಯಲ್ಲಿ ಪ್ರಕರಣ ಸಂಖ್ಯೆ 4/2013-14 ಎಂದು ಪ್ರಶ್ನಿಸಿರುತ್ತಾನೆ ಮತ್ತು ಸದರಿ ವಿಷಯ ನನಗೆ ಗೊತ್ತಿದ್ದು, ಸದರಿ ಪ್ರಕರಣ ಈಗಲೂ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ಕೊಂಡಮ್ಮ ಕೋಂ ಲೇಟ್ ರಾಮಯ್ಯ ನನ್ನ ತಾಯಿಯಾಗಿರುತ್ತಾರೆಂದರೆ ಸರಿ. ನನ್ನ ತಾಯಿ ಕೊಂಡಮ್ಮ ಹಾಗೂ ವಿವಾದಿತ ಖಾತೆದಾರರಾದ ಬಾಲಮ್ಮ ಹಾಗೂ ಸೋಮಣ್ಣ ರವರಿಗೆ ಯಾವುದೇ ಸಂಬಂಧ ಇರುವುದಿಲ್ಲ. ಸದರಿ ಕೊಂಡಮ್ಮ ಬಾಲಮ್ಮ ಹಾಗೂ ಸೋಮಣ್ಣ ಇವರಿಂದ ಯಾವುದೇ ಪತ್ರವನ್ನು ಬರೆಸಿಕೊಂಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕೊಂಡಮ್ಮ ಮೂಲ ಖಾತೆದಾರನಾದ ವೆಂಕಟಪ್ಪನಿಂದ ಯಾವುದೇ ಪತ್ರ ಬರೆಸಿಕೊಂಡಿರುವುದಿಲ್ಲ ಎಂದರೆ

ನನಗೆ ಗೊತ್ತಿರುವುದಿಲ್ಲ. ಕೊಂಡಮ್ಮ ದಾವಾಸ್ತಿಯಲ್ಲಿ ಎಂದಿಗೂ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಕೊಂಡಮ್ಮ ಸ್ವಾಧೀನದಲ್ಲಿ ಇರದೆ ಇದ್ದರು ಮತ್ತು ಯಾವುದೇ ಹಕ್ಕು ಇರದೆ ಇದ್ದರು ಕಂದಾಯ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ತನ್ನ ಹೆಸರನ್ನು ದಾಖಲಿಸಿಕೊಂಡಿರುತ್ತಾಳೆಂದರೆ ಸರಿಯಲ್ಲ. ನನ್ನ ತಾಯಿ ಕೊಂಡಮ್ಮ ಈಗ ಮೃತರಾಗಿರುತ್ತಾರೆ. ನನ್ನ ತಾಯಿ ಕೊಂಡಮ್ಮ ಮೃತರಾದ ನಂತರ ಅವರ ಹೆಸರಿನಲ್ಲಿರುವ ದಾವಾಸ್ತಿ ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆಂದರೆ ಸರಿ. ದಾವಾಸ್ತಿಯನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಾವು ಪರಿಖಾತ್ ದಾಖಲೆಯ ಮೇರೆಗೆ ದಾವಾಸ್ತಿಯನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನೋಂದಣಿಯಾಗಿರುವುದಿಲ್ಲ, ನೋಟರಿ ಮಾಡಿಸಿರುತ್ತೇನೆ. ಸದರಿ ಪರಿಖಾತ್ ನಾನು, ನನ್ನ ಸಹೋದರರು ಮತ್ತು ಸಹೋದರಿ ಸೇರಿಕೊಂಡು ಮಾಡಿಕೊಂಡಿರುತ್ತೇವೆ. ದಾವಾಸ್ತಿಯನ್ನು ಮಾತ್ರ ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿರುತ್ತೇವೆ, ಬೇರೆ ಆಸ್ತಿ ಇರುವುದಿಲ್ಲ. ನಮ್ಮ ತಂದೆಗೆ ಸೇರಿದ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. ಸದರಿ ವಿಭಾಗ ಪತ್ರದಲ್ಲಿ ದಾವಾಸ್ತಿಯ ವಿಸ್ತೀರ್ಣ 70 ಅಗಲ X 35 ಉದ್ದ ಇರುತ್ತದೆ ಎಂದು ನಮೂದಿಸಲಾಗಿದೆ. ದಾವಾಸ್ತಿಯ ಮೇಲೆ ನನ್ನದಾಗಲೀ, ನನ್ನ ತಾಯಿಯದಾಗಲೀ, ನಮ್ಮ ಕುಟುಂಬದವರಾದಗಲೀ ಹಕ್ಕು ಇಲ್ಲದೆ ಇರುವುದರಿಂದ ವಿಭಾಗ ಪತ್ರ ಮಾಡಿಕೊಳ್ಳಲು ಸಹ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಕುಟುಂಬದವರು ಸೇರಿಕೊಂಡು ಖಾತೆಗೋಸ್ಕರ ಕೊಟ್ಟಿ ವಿಭಾಗ ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ. ದಾವಾಸ್ತಿಯು ನನ್ನ ತಾಯಿ ಮತ್ತು ನನ್ನ ಹೆಸರಿಗೆ ವರ್ಗಾವಣೆಯಾದ ನಂತರ ಪ್ರತಿವಾದಿಯರು ಸದರಿ

ವರ್ಗಾವಣೆಯನ್ನು ಪ್ರಶ್ನಿಸಿ ತಾಲ್ಲೂಕು ಪಂಚಾಯಿತಿಯಲ್ಲಿ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ತಕರಾರುಗಳನ್ನು ಸಲ್ಲಿಸಿ ಈಗಲೂ ಚಾಲ್ತಿಯಲ್ಲಿರುತ್ತದೆ ಎಂದರೆ ಸಾಕ್ಷಿಯು ಸದರಿ ಪ್ರಕರಣ ಮುಕ್ತಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ಅಂತಿಮ ಆದೇಶ ಆಗಿರುವುದಿಲ್ಲ ಎಂದರೆ ಸರಿ.

ಸದರಿ ತಾಲ್ಲೂಕು ಪಂಚಾಯಿತಿಯಲ್ಲಿರುವ ಪ್ರಕರಣದ ಸಂಖ್ಯೆ 8/2016-17 ಎಂದು ಇರುತ್ತದೆ. ಸದರಿ ಪ್ರಕರಣದಲ್ಲಿ ಪಿಡಿಓ ಹಾರೋಹಳ್ಳಿ ರವರು ವರದಿ ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ವರದಿಯಲ್ಲಿ ದಾವಾಸ್ತಿಯು ವೆಂಕಟಪ್ಪ ಬಿನ್ ತಿರುಮಲನಾಯ್ಕ ಇವರ ಹೆಸರಿನಲ್ಲಿದ್ದು, ನಂತರ ಬಾಲಮ್ಮ, ಸೋಮಣ್ಣ, ಕೊಂಡಮ್ಮ ಹಾಗೂ ನಾನು ನಾರಾಯಣಸ್ವಾಮಿ ಯಾವುದೇ ದಾಖಲೆ ಇಲ್ಲದೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುತ್ತಾರೆಂದು ವರದಿ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಮಾವ ವೆಂಕಟಪ್ಪ ತೀರಿದ ನಂತರ ದಾವಾಸ್ತಿಯಲ್ಲಿ 1 ನೇ ಪ್ರತಿವಾದಿಯ ಗಂಡ ದೇವರಾಜು ಅವರ ಮರಣದ ನಂತರ ಪ್ರತಿವಾದಿಯರು ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾಸ್ತಿಯ ಹಳೆಯ ನಂಬರ್ ನಲ್ಲಿ ಪ್ರತಿವಾದಿಯರ ಆಧಾರ್ ಕಾರ್ಡ್ , ರೇಷನ್ ಕಾರ್ಡ್ ಮತ್ತು ಕಂದಾಯ ದಾಖಲೆಗಳು ಅವರ ಹೆಸರಿನಲ್ಲಿರುತ್ತವೆಂದರೆ ಸರಿಯಲ್ಲ. ದಾವಾಸ್ತಿ ಹಳೆಯ ನಂ.360/400 ನ್ನು ವಿಭಜನೆ ಮಾಡಿ ನಂ.360/400/1 ಎಂದು ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

ಸದರಿ ಪಿಡಿಓ ರವರ ವರದಿಯಲ್ಲಿ ನಾನು ಮತ್ತು ನನ್ನ ತಾಯಿ ನಂ.360/400 ನ್ನು ವಿಭಾಗ ಮಾಡಿಕೊಂಡು ನಂ.360/400/1 ಎಂದು

ಯಾವುದೇ ದಾಖಲೆಗಳು ಇಲ್ಲದೆ ಮಾಡಿಸಿಕೊಂಡಿರುತ್ತಾರೆಂದು ವರದಿ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.